ತಾವು ಇರಲಿಲ್ಲ. ಪ್ರಶ್ನೋತ್ತರ ವೇಳೆ ಮುಗಿದಿದೆ. 11–20 ಕ್ಕೆ ಶುರುವಾಗಿ 12–25 ಕ್ಕೆ ಮುಗಿಯಿತು. ಸಮಯವಿಲ್ಲ.

ಶ್ರೀ ಎನ್. ಸಂಪಂಗಿ : ನಾನು ಆಗಲೇ ಬಂದಿದ್ದೇನೆ.

ಅಧ್ಯಕ್ಷರು : ತಮ್ಮ ಹೆಸರು ಕರೆದಿದ್ದೇನೆ ನೀವು ಇರಲಿಲ್ಲ. ನೀವು ವಾದ ಮಾಡಬೇಡಿ, ಮುಗಿದಿದೆ.

ಶ್ರೀ ಟಿ. ಬಿ. ಜಯಚಂದ್ರ : ಅವಕಾಶ ಕೊಡಬೇಕಾಗುತ್ತದೆ. ಇದೊಂದು ಸಾರಿ ಕೊನೆಯದಾಗಿ ಅವಕಾಶ ಕೊಟ್ಟುಬಿಡಿ.

ಅಧ್ಯಕ್ಷರು : ಇದು ಪುನರಾವರ್ತನೆಯಾಗಬಾರದು. ನಿನ್ನೆನೂ ನಾನು ಕರೆದಿದ್ದೇನೆ.

ಶ್ರೀ ಎನ್. ಸಂಪಂಗಿ : ನಿನ್ನೆ ನಾನು ಇರಲಿಲ್ಲ. ನಿನ್ನೆ ಯಾವುದೂ ಪ್ರಶ್ನೆ ಬಂದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಕೊನೆಯದಾಗಿ ಒಂದು ಅವಕಾಶ ಕೊಡಿ.

ಅಧ್ಯಕ್ಷರು : ಸರಿ, ಅವರು ಕೇಳಿದ ಮೇಲೆ ನೀವು ನಂತರ ಕೇಳಿ.

ಶ್ರೀ ಎಸ್. ವಿ. ರಾಮಚಂದ್ರ : ಅಣಜಿಗೆರೆ ಮತ್ತು ಉಚ್ಚಂಗಿ ಭಾಗದಲ್ಲಿ ತೀವ್ರವಾದ ನೀರಿನ ಸಮಸ್ಯೆಯಿದೆ ದಯಮಾಡಿ ಅದರ ಬಗ್ಗೆ ಗಮನ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ ಹೇಳಿದ ಹಾಗೆ ಮೊದಲು ಈ ಯೋಜನೆ ಜಾರಿಗೆ ತಂದು ನಂತರ ಅವರು ಈಗ ಏನು ಹೇಳಿದರು ಅದರ ಬಗ್ಗೆನೂ ಆದ್ಯತೆ ಕೊಡುತ್ತೇವೆ.

ಶ್ರೀ ಎನ್. ಸಂಪಂಗಿ : ದಯವಿಟ್ಟು ನೀವು ನಮ್ಮ ಸಹಾಯಕ್ಕೆ ಬರಬೇಕು. 5 ನೇ ತಾರೀಕು ನೀವೇ ಅಡ್ಜರ್ನ್ ಮಾಡಿಬಿಟ್ಟಿರಿ ಆಗ ನನ್ನ ಪ್ರಶ್ನೆ ಇತ್ತು ಆ ಪ್ರಶ್ನೆ ಹೋಯಿತು ಆಗ ನಾನೇನು ಮಾಡಲಿ?

ಅಧ್ಯಕ್ಷರು : ಅದನ್ನು ನಿಮ್ಮ ನಾಯಕರನ್ನು ಮತ್ತು ಸಭಾನಾಯಕರನ್ನು ಕೇಳಿ.

ಬೆಂಗಳೂರಿನಲ್ಲಿ ಬಾರ್ ಮತ್ತು ವೈನ್ ಶಾಪ್‌ಗಳನ್ನು ತೆರೆಯಲು ಸಮಯ ನಿಗಧಿಪಡಿಸುವ ಬಗ್ಗೆ

862 ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ):–ಮಾನ್ಯ ಅಬಕಾರಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಂಗಳೂರಿನಲ್ಲಿರುವ ಬಾರ್ ಮತ್ತು ವೈನ್ ಮಾರಾಟ ಶಾಪ್‌ಗಳನ್ನು ಬೆಳಿಗ್ಗೆ ಎಷ್ಟು ಗಂಟೆಯಿಂದ ರಾತ್ರಿ ಎಷ್ಟು ಗಂಟೆಯವರೆವಿಗೂ ತೆರೆದಿರಬೇಕೆಂಬ ಸಮಯವನ್ನು ನಿಗಧಿಪಡಿಸಲಾಗಿದೆಯೇ;

ಆ) ರಾತ್ರಿ 8–00 ಗಂಟೆಯ ವೇಳೆಗೆ ಆರಕ್ಷಕ ಪೇದೆಗಳು ಬಂದು ಬಾರ್ ಮತ್ತು ವೈನ್ ಶಾಪ್‌ಗಳನ್ನು ಮುಚ್ಚುವಂತೆ ಪದೇ ಪದೇ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಆರಕ್ಷಕ ಅಧಿಕಾರಿಗಳು ಹಾಗೂ ಪೇದೆಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಮಾನ್ಯ ಅಬಕಾರಿ ಸಚಿವರು :–

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಎನ್. ಸಂಪಂಗಿ : ನಾನು ಬೆಂಗಳೂರಿನಲ್ಲಿರುವ ಬಾರ್ ಮತ್ತು ವೈನ್ ಮಾರಾಟ ಶಾಪ್‌ಗಳನ್ನು ಬೆಳಗ್ಗೆ ಎಷ್ಟು ಗಂಟೆಯಿಂದ ರಾತ್ರಿ ಎಷ್ಟು ಗಂಟೆಯವರೆವಿಗೂ ತೆರದಿರಬೇಕೆಂಬ ಸಮಯವನ್ನು ನಿಗಧಿಪಡಿಸಲಾಗಿದೆಯೆ ಎಂದು ಕೇಳಿದ್ದೇನೆ. ಅವರು ಅದಕ್ಕೆ ಉತ್ತರಿಸಿರುವುದು ಏನೆಂದರೆ, ಹೌದು. ಅಂದರೆ ಯಾರು ಇದನ್ನು ಉತ್ತರ ರೆಡಿ ಮಾಡಿರುವುದು? ಬೆಳಗ್ಗೆನೊ ಅಥವಾ ರಾತ್ರಿನೋ ಉತ್ತರ ರೆಡಿ ಮಾಡಿದ್ದಾರೋ ನನಗೆ ಗೊತ್ತಿಲ್ಲ. ನಾನು ಬೆಳಗ್ಗೆ ಎಷ್ಟು ಗಂಟೆಗೆ ಪ್ರಾರಂಭ ಮಾಡುತ್ತೀರಿ? ರಾತ್ರಿ ಎಷ್ಟು ಗಂಟೆಯವರೆವಿಗೂ ತೆರದಿರುತ್ತೀರಿ ಎಂದು ಕೇಳಿದ್ದೇವೆ. ಅದಕ್ಕೆ ಉತ್ತರ ಹೌದು ಎಂದು ಕೊಟ್ಟಿದ್ದಾರೆ. ಅದಕ್ಕೆ ಎಷ್ಟು ಗಂಟೆ ಎಂದು ಕೊಟಿದ್ದರೆ ಚೆನ್ನಾಗಿರುತ್ತಿತ್ತು. ಹೀಗಾಗಿ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆವಿಗೂ ತೆರದಿರುತ್ತೀರಿ ಎನ್ನುವ ಬಗ್ಗೆ ಸಮಯವನ್ನು ತಿಳಿಸಬೇಕೆಂದು ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಯಲ್ಲಿ ಸ್ವಲ್ಪ ಗೊಂದಲ ಇರುವ ಹಾಗೆ ಕಾಣಿತು ಅದಕೋಸ್ಕರ ಕ್ಲಾರಿಫೈ ಮಾಡಿದೆ. ಅವರು ಎಷ್ಟು ಗಂಟೆಗೆ ತೆಗೆಯುತ್ತೀರಿ, ಎಷ್ಟು ಗಂಟೆಗೆ ಮುಚ್ಚುತ್ತೀರಿ ಎಂದು ಕೇಳಿದ್ದಾರೆ. ನಮಗೆ ಏನು ಅರ್ಥವಾಯಿತು ಎಂದರೆ, ಮಂತ್ರಿಗಳು ಎಷ್ಟು ಗಂಟೆಗೆ ಮಲಗುತ್ತಾರೆ, ಎಷ್ಟು ಗಂಟೆಗೆ ಏಳುತ್ತಾರೆಂದು ಕೇಳಿದ ಹಾಗೆ ಇತ್ತು. ಅದಕ್ಕೋಸ್ಕರ ಕೇಳಿ ಕ್ಲಾರಿಫೈ ಮಾಡಿದೆ.

ಅಧ್ಯಕ್ಷರು : ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಎಂದು ಹೇಳಿಬಿಡಿ.

ಶ್ರೀ ಎಂ. ಪಿ. ರೇಣುಕಾಚಾರ್ಯ : ಬೆಂಗಳೂರಿನಲ್ಲಿರುವ ಬಾರ್ ಮತ್ತು ವೈನ್ಸ್ ಮಾರಾಟ ಶಾಪ್‌ಗಳಿಗೆ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಎಂದು ಸಮಯ ಕೇಳಿದ್ದಾರೆ. ಈಗಾಗಲೇ ನಾನು ಉತ್ತರದಲ್ಲಿ ಒದಗಿಸಿದ್ದೇವೆ. ಬಾರ್ ಮತ್ತು ವೈನ್ ಶಾಪ್‌ಗಳು

ಕರ್ನಾಟಕ ಅಬಕಾರಿ ನಿಯಮಗಳು 1967 ರ ನಿಯಮ 3 ರನ್ವಯ ಮಂಜೂರು ಮಾಡಬೇಕಾಗಿರುತ್ತದೆ. ಸದರಿ ಸನ್ನದುಗಳನ್ನು ಸದರಿ ನಿಯಮ 5ಎ ಅನ್ವಯ ಪ್ರತಿ ವರ್ಷ ನವೀಕರಿಸಬೇಕಾಗುತ್ತದೆ. ಕರ್ನಾಟಕ ಅಬಕಾರಿ ಸನ್ನದುಗಳು ನಿಯಮಗಳು 1967 ರ ನಿಯಮದಂತೆ.,

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ ಅವರ ಪ್ರಶ್ನೆ ಬಹಳ ಸಿಂಪಲ್ ಇದೆ ಹೀಗಾಗಿ ಸಿಂಪಲ್ ಆಗಿ ಆನ್ಸರ್ ಮಾಡಿಬಿಡಿ.

ಶ್ರೀ ಎಂ. ಪಿ. ರೇಣುಕಾಚಾರ್ಯ : ನಾನು ಉತ್ತರ ಕೊಡುತ್ತೇನೆ. 1967ರ ನಿಯಮ 4 ರನ್ವಯ ಅಬಕಾರಿ ಆಯುಕ್ತರು ಸನ್ನದು ವ್ಯಾಪಾರದ ವೇಳೆಯನ್ನು ನಿಗದಿಪಡಿಸಲಾಗಿರುತ್ತದೆ. ಚಿಲ್ಲರೆ ಮಧ್ಯ ಮಾರಾಟ ಬೆಳಗ್ಗೆ 10 ಗಂಟೆಯಿಂದ ರಾತ್ರಿ 9–30 ರವರೆಗೆ, ಬಾರ್ ಮತ್ತು ರಸ್ಟೋರೆಂಟ್ ಗಳು ಬೆಳಗ್ಗೆ 10 ಗಂಟೆಯಿಂದ ರಾತ್ರಿ 10–30 ಗಂಟೆಯವರೆಗೆ.

ಅಧ್ಯಕ್ಷರು : ಬಹುಶಃ ಅಧಿಕಾರಿಗಳು ಮಾನ್ಯ ಮಂತ್ರಿಗಳನ್ನು ತಪ್ಪು ದಾರಿಗೆ ಎಳೆದಿದ್ದಾರೆ. ಯಾರು ಈ ಅಧಿಕಾರಿಗಳು, ಇದು ಅಧಿಕಾರಿಗಳು ಮಾಡಿರುವ ಮಿಸ್ಟೇಕ್.

ಶ್ರೀ ಎಂ. ಪಿ. ರೇಣುಕಾಚಾರ್ಯ : CL-4 ಕ್ಲಬ್ ಸನ್ನದು ಬೆಳಗ್ಗೆ 9 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ. ಲಾಡ್ಜಿಂಗ್ ಅಂಡ್ ಹೋಟೆಲ್ಸ್ ಸನ್ನದು ಬೆಳಗ್ಗೆ 9 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ. ಸ್ಟಾರ್ಸ್ ಹೋಟೆಲ್ ಸನ್ನದು ಬೆಳಗ್ಗೆ 9 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ಎಂದು ಸಮಯ ನಿಗಧಿಯಾಗಿದೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಸದನಕ್ಕೆ ಉತ್ತರ ರೆಡಿ ಮಾಡಿ ಕಳುಹಿಸುವಾಗ ಅಧಿಕಾರಿಗಳು ಇಷ್ಟು ಬೇಜವಾಬ್ದಾರಿಯಿಂದ ಕಳುಹಿಸಿದರೆ ಹೇಗೆ?

ಅಧ್ಯಕ್ಷರು : ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸಚಿವರೆ, ಬೇಜವಾಬ್ದಾರಿಯ ಉತ್ತರ ಕಳುಹಿಸಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಎಂ. ಪಿ. ರೇಣುಕಾಚಾರ್ಯ : ಪರಿಶೀಲಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಆಯಿತು ಸಾಕು ಬಿಡಿ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನಿಡಲಾದ ಉತ್ತರಗಳು.

ಶ್ರೀ ಜಗದೀಶ್ ಶೆಟ್ಟರ್ : (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 07–07–10 ರ 8 ನೇ ಪಟ್ಟಿಯಿಂದ ಲಿಖಿತ